# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರ. ಸಂ. | : | 55(107) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 11.08.2025 |

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕರ್ನಾಟಕ ರಾಜ್ಯದ ಶಿಕ್ಷಣ ಸಂಸ್ಥೆ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ನಡೆದಿರುವ ಇಲ್ಲಿಯವರೆಗೆ ಹಣಕಾಸು ಅಂಕಪಟ್ಟಿ ಮತ್ತು ನೇಮಕಾತಿ ಸಹಿತ ಎಷ್ಟು ವಿವಿಧ ರೀತಿಯ ಹಗರಣಗಳು ಬೆಳಕಿಗೆ ಬಂದಿವೆ; ಈ ಅವ್ಯವಹಾರಗಳು ಯಾವಕಾರಣದಿಂದಾಗಿ, ಅವ್ಯವಹಾರ ನಡೆದ ಎಷ್ಟು ಅವಧಿಯ ನಂತರ ಸರ್ಕಾರದ ಗಮನಕ್ಕೆ ಹೇಗೆ ಬಂದಿವೆ; (ವಿವರ ನೀಡುವುದು)</td><td>
ಕರ್ನಾಟಕ ರಾಜ್ಯದ ಶಿಕ್ಷಣ ಸಂಸ್ಥೆ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ನಡೆದಿರುವ ಕಳೆದ 5 ವರ್ಷಗಳಲ್ಲಿ ಹಣಕಾಸು ಅಂಕಪಟ್ಟಿ ಮತ್ತು ನೇಮಕಾತಿ ಸಹಿತ ಹಗರಣಕ್ಕೆ ಸಂಬಂಧಿಸಿದಂತೆ, ಒಟ್ಟು 12 ಪ್ರಕರಣಗಳು ಬೆಳಕಿಗೆ ಬಂದಿರುತ್ತದೆ.<br><br>
ವಿಶ್ವವಿದ್ಯಾಲಯಗಳಲ್ಲಿ ನಡೆದಿರುವ ಹಣಕಾಸು, ಅಂಕಪಟ್ಟಿ ಮತ್ತು ನೇಮಕಾತಿ ಸಹಿತ ವಿವಿಧ ರೀತಿಯ ಹಗರಣಗಳ ವಿವರಗಳು ಈ ಕೆಳಕಂಡಂತ್ತಿವೆ.
<table>
<tr><th>ಕ್ರ. ಸಂ.</th><th>ವಿಶ್ವವಿದ್ಯಾಲಯದ ಹೆಸರು ಮತ್ತು ವಿವರಗಳು</th><th>ಹಗರಣದ ವಿವರಗಳು</th><th>ಯಾವ ವರ್ಷ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ.</th></tr>
<tr><td>1.</td><td>ಬೆಂಗಳೂರು ವಿಶ್ವವಿದ್ಯಾಲಯ</td><td>1) ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸೆಪ್ಟೆಂಬರ್/ ಅಕ್ಟೋಬರ್ ನಿಂದಜರುಗಿದ ಸ್ನಾತಕ ಪದವಿ ಕೋರ್ಸುಗಳಲ್ಲಿ 804 ಉತ್ತರ ಪತ್ರಿಕೆಗಳ ಅಂಕಗಳನ್ನು ತಿದ್ದಿ ಫಲಿತಾಂಶವನ್ನು ಕೃತಿಮಗೊಳಿಸಿ ಒಡಂಬಡಿಕೆಯಲ್ಲಿ ರಹಸ್ಯ ಕಾಪಾಡುವ ಷರತ್ತನ್ನು ಉಲ್ಲಂಘಿಸಿ ಕ್ರಿಮಿನಲ್ ಸ್ವರೂಪದ ಅಕ್ರಮವೆಸಗಿರುವ ಬಗ್ಗೆ.<br><br>2) 1998ನೇ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ನಕಲಿ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ವಿತರಿಸಿದ ಪ್ರಮಾಣ ಪತ್ರದ ಬಗ್ಗೆ.<br><br>3) ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 2017-18ನೇ ಸಾಲಿನಲ್ಲಿ ನಡೆದ ಪರೀಕ್ಷೆಗಳ ಸಂಬಂಧದಲ್ಲಿ</td><td>1. ದಿನಾಂಕ:05.01.2021 ರಂದು ಬೆಂಗಳೂರು ವಿಶ್ವವಿದ್ಯಾಲಯವು ಪ್ರಕರಣವನ್ನು ಸಿ.ಐ.ಡಿ. ಗೆ ವಹಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.<br><br>2. ದಿನಾಂಕ: 30.03.2015ರಂದು ಈ ಪ್ರಕರಣವು ಪೋಲೀಸ್ ಠಾಣೆಯಲ್ಲಿ ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>3. ದಿನಾಂಕ: 20.09.2022ರಂದು ಮಹಾ ಲೇಖಪಾಲರ ಕಛೇರಿಯ ಸರ್ಕಾರಕ್ಕೆ ಸಲ್ಲಿಸಲಾದ ಆಕ್ಷೇಪಣ ಕಂಡಿಕೆ ಮೂಲಕ</td></tr>
</table>
</td></tr>
</table>

| | | | | | |
|---|---|---|---|---|---|
| | | | | ಉತ್ತರ ಪತ್ರಿಕೆಗಳ ಮುದ್ರಣ ಅಭೀಕ್ಷಣೆ ಹಾಗೂ ನಿರ್ವಹಣೆ ಮತ್ತು ಇತರೆ ಕಾರ್ಯಗಳ ಸಂಗ್ರಹಣೆ ಬಗ್ಗೆ ಕಾರ್ಯದೇಶವನ್ನು ಪರಿಷ್ಕರಿಸಿದ ಕಾರಣ ಈ ಪರೀಕ್ಷಾ ಕಾರ್ಯಗಳನ್ನು ಪೂರೈಸಿದ M/s Attris Technology Agency ಗೆ ರೂ. 0.95 ಕೋಟಿಗಳಷ್ಟು ಅನುಸುಚಿತ ಲಾಭದಲ್ಲಿ ಪರಿಣಮಿಸಿರುವ ಬಗ್ಗೆ. | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| | | 2 | **ಮಂಗಳೂರು ವಿಶ್ವವಿದ್ಯಾಲಯ** | ಮಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ.ಬೈರಪ್ಪ ಇವರ ಆಡಳಿತ ಅವಧಿಯಲ್ಲಿ ಪರೀಕ್ಷೆ ನಿರ್ವಹಣಾ ಗುತ್ತಿಗೆ, ಹಾಸ್ಟೆಲ್ ಗುತ್ತಿಗೆ, ಸೋಲಾರ್, ಕಂಪ್ಯೂಟರ್ ಹಾಗೂ ಸಿ.ಸಿ.ಟಿ.ವಿ, ಖರೀದಿಯಲ್ಲಿ ಭ್ರಷ್ಟಾಚಾರ ಹಾಗೂ ರಾಜ್ಯಪಾಲರ ಅನುಮತಿ ಇಲ್ಲದಿದ್ದರೂ ಅಕ್ರಮ ನೇಮಕಾತಿ ಬಗ್ಗೆ ತನಿಖೆ ನಡೆಸುವಂತೆ ಭಾರತೀಯ ವಿದ್ಯಾರ್ಥಿ ಪರಿಷತ್ ಆಗ್ರಹಿಸುವ ಕುರಿತು. | ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ. 26.02.2024ರಂದು ವಿಚಾರಣೆ ನಡಸಿ ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. |
| | | **3** | **ಕುವೆಂಪು ವಿಶ್ವವಿದ್ಯಾಲಯ** | 1. ಕುವೆಂಪು ವಿಶ್ವವಿದ್ಯಾಲಯದಲ್ಲಿ ಸ್ಮಾರ್ಟ್ ಕ್ಲಾಸ್ ಒದಗಿಸಲು ಸಮಾಜ ಕಲ್ಯಾಣ ಇಲಾಖೆಯಿಂದ ಬಿಡುಗಡೆ ಮಾಡಲಾದ ಅನುದಾನ ದುರುಪಯೋಗದ ಕುರಿತು.<br><br>2. ಶ್ರೀ ವಿದ್ಯಾಶಂಕರ್, ಸಹಾಯಕ ಪ್ರಾಧ್ಯಾಪಕರು ಇವರು ಪಿ.ಹೆಚ್.ಡಿ., ಎಂಟೆಕ್ ಸುಳ್ಳು ಪ್ರಮಾಣ ಪತ್ರ ನೀಡಿ ನೇಮಕಗೊಂಡಿರುವ ದೂರಿನ ಕುರಿತು. | 1. ಕುವೆಂಪು ವಿಶ್ವವಿದ್ಯಾಲಯದಲ್ಲಿ ಸ್ಮಾರ್ಟ್ ಕ್ಲಾಸ್ ಒದಗಿಸಲು ಸಮಾಜ ಕಲ್ಯಾಣ ಇಲಾಖೆಯಿಂದ ಬಿಡುಗಡೆ ಮಾಡಲಾದ ಅನುದಾನ ದುರುಪಯೋಗದ ಕುರಿತು ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ರವೀಂದ್ರನಾಥ್.ಹೆಚ್.ಬಿ. ಇವರು ದಿ:05.07.2024ರಂದು ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.<br><br>2. ಕುವೆಂಪು ವಿಶ್ವವಿದ್ಯಾಲಯದಲ್ಲಿ ಶ್ರೀ ವಿದ್ಯಾಶಂಕರ್, ಸಹಾಯಕ ಪ್ರಾಧ್ಯಾಪಕರು ಇವರು ಪಿ.ಹೆಚ್.ಡಿ. ಎಂಟೆಕ್ ಸುಳ್ಳು ಪ್ರಮಾಣಪತ್ರ ನೀಡಿ ನೇಮಕಗೊಂಡಿರುವ ದೂರಿನ ಕುರಿತು ಅಧ್ಯಕ್ಷರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾರ್ಯನಿರತ ನೌಕರರ ಸಂಘ ಇವರು ದಿನಾಂಕ: 10.09.2015 ರಂದು ದೂರು ಸರ್ಕಾರಕ್ಕೆ ಸಲ್ಲಿಸಿದ್ದು ಹಾಗೂ ಭಾರತದ ಲೆಕ್ಕ ನಿಯಂತ್ರಕರು ಹಾಗೂ ಮಹಾಲೇಖಪಾಲರು(ಸಾಮಾನ್ಯ ಮತ್ತು ಸಾಮಾಜಿಕ ವಲಯ) ಇವರ ಆಕ್ಷೇಪಣಾ ಕಂಡಿಕೆ: 4.1.3.2/ಬಿ ರಲ್ಲಿ ಕೂಡ ಕನಿಷ್ಠ ವಿದ್ಯಾರ್ಹತೆ ಇಲ್ಲದ ಅಭ್ಯರ್ಥಿಯನ್ನು ನೇಮಕ ಮಾಡಿರುವ ಕುರಿತು ಕಂಡಿಕೆಯಲ್ಲಿ ಉಲ್ಲೇಖಿಸಲಾಗಿರುತ್ತದೆ. |

| | | | | | | |
|---|---|---|---|---|---|---|
| | | | | | ಸಾರ್ವಜನಿಕ ಲೆಕ್ಕ ಪತ್ರ ಸೂಚನೆಯನುಸಾರ ಕುಲಸಚಿವ (ಆಡಳಿತ) ಕುವೆಂಪು ವಿಶ್ವವಿದ್ಯಾಲಯ ಇವರ ಅಧ್ಯಕ್ಷತೆಯಲ್ಲಿ ಏಕ ಸದಸ್ಯ ತನಿಖಾ ಸಮಿತಿಯನ್ನು ರಚಿಸಿ ವರದಿ ನೀಡುವಂತೆ ಸರ್ಕಾರದ ಪತ್ರ ದಿನಾಂಕ: 01.04.2024ರಲ್ಲಿ ಕೋರಲಾಗಿರುತ್ತದೆ.<br><br>ಸದರಿ ಸಮಿತಿಯು ದಿನಾಂಕ: 24.10.2024 ರಂದು ವರದಿ ನೀಡಿದ್ದು, ಪ್ರಸ್ತುತ ಕಡತವು ಪರಿಶೀಲನೆಯಲ್ಲಿರುತ್ತದೆ. | |
| | | **4** | **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ** | **1.** 2009-10ನೇ ಸಾಲಿನಿಂದ 2015-16ರ ಸಾಲಿನ ವರೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ದೇಶದೆಲ್ಲೆಡೆ ಸಹಭಾಗಿತ್ವ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ವಿದ್ಯಾರ್ಥಿಗಳಿಂದ ಸ್ವೀಕರಿಸಿರುವ ಶುಲ್ಕವನ್ನು ದುರ್ಬಳಕೆ ಮಾಡಿಕೊಂಡಿರುವ ಬಗ್ಗೆ.<br><br>**2.** ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯದ ಕುಲಸಚಿವರು (ಆಡಳಿತ) ಇವರು ವಿಶ್ವವಿದ್ಯಾಲಯದ ಸಿಬ್ಬಂದಿಗಳ ನೇಮಕಾತಿ, ವರ್ಗಾವಣೆ ಹಾಗೂ ಪದನಾಮ ಬದಲಾವಣೆಯಲ್ಲಿ ವಿಶ್ವವಿದ್ಯಾಲಯದ ಸಿಬ್ಬಂದಿಗಳಿಂದಲೇ ಲಂಚದ ಬೇಡಿಕೆ ಇಟ್ಟು, ಹಣ ವಸೂಲಿ ಮಾಡುತ್ತಿದ್ದಾರೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ನೌಕರರ ಸಂಘದವರು ವಿಶ್ವವಿದ್ಯಾಲಯದ ಕುಲಸಚಿವರ (ಆಡಳಿತ) ಇವರ ವಿರುದ್ಧ ನಡೆಸಿರುವ ಪ್ರತಿಭಟನೆಯ ಕುರಿತು. | **1.** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಸಚಿವರ ದಿನಾಂಕ: 15-02-2022 ರ ಪತ್ರದಲ್ಲಿ ಈ ಹಗರಣವನ್ನು ಸಿ.ಬಿ.ಐ. ಗೆ ವಹಿಸುವಂತೆ ಕೋರಿರುತ್ತಾರೆ.<br><br>2. ಈ ವಿಷಯವು ದಿನಪತ್ರಿಕೆಗಳಲ್ಲಿ ಪ್ರಕಟವಾದ ಹಿನ್ನಲೆಯಲ್ಲಿ ವಿಷಯವು ವಿಧಾನ ಮಂಡಲದಲ್ಲಿ ದಿನಾಂಕ: 19.3.2025ರಂದು ಪ್ರಸ್ತಾಪವಾಗಿರುತ್ತದೆ. | |
| | | **5** | **ಗುಲಬರ್ಗಾ ವಿಶ್ವವಿದ್ಯಾಲಯ** | **1**.ಗುಲಬರ್ಗಾ ವಿಶ್ವವಿದ್ಯಾಲಯ ದಲ್ಲಿ 2021 ರಿಂದ 2024ರವರೆಗೆ ಅಂಕಪಟ್ಟಿ ನೀಡಲು ಭೌತಿಕವಾಗಿ ಅಂಕಪಟ್ಟಿ ಮುದ್ರಿಸಿ ಮತ್ತು ಸರಬರಾಜು ಮಾಡಿ ರೂ.11.00ಕೋಟಿ ವಿಶ್ವವಿದ್ಯಾಲಯಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವ ಪ್ರಕರಣದ ಕುರಿತು<br><br>**2.** ಗುಲಬರ್ಗಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಪರೀಕ್ಷಾ ಮೌಲ್ಯಮಾಪನ ಹಾಗೂ ಫಲಿತಾಂಶ ಸಮಯಕ್ಕೆ ಸರಿಯಾಗಿ | 1. ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ 2021 ರಿಂದ 2024ರವರೆಗೆ ಅಂಕಪಟ್ಟಿ ನೀಡಲು ಭೌತಿಕವಾಗಿ ಅಂಕಪಟ್ಟಿ ಮುದ್ರಿಸಿ ಮತ್ತು ಸರಬರಾಜು ಮಾಡಿ ರೂ.11.00 ಕೋಟಿ ವಿಶ್ವವಿದ್ಯಾಲಯಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವ ಕುರಿತು ವಿಶ್ವವಿದ್ಯಾಲಯವು ದಿನಾಂಕ:05.04.2025ರಂದು ವರದಿ ಸಲ್ಲಿಸಿರುತ್ತದೆ.<br><br>2.ಗುಲಬರ್ಗಾ ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳ ಪರೀಕ್ಷಾ ಮೌಲ್ಯಮಾಪನ ಹಾಗೂ ಫಲಿತಾಂಶವನ್ನು ಸಮಯಕ್ಕೆ ಸರಿಯಾಗಿ ಪ್ರಕಟಿಸದೇ ಇರುವ ಬಗ್ಗೆ | |

| | | | | | |
|---|---|---|---|---|---|
| | | | | ಪ್ರಕಟಿಸದೇ ಹಾಗೂ ಅನರ್ಹ ಮತ್ತು ಅನಧಿಕೃತ ಅಧ್ಯಾಪಕರಿಂದ ಮೌಲ್ಯಮಾಪನ ಮಾಡಿರುವ ಬಗ್ಗೆ.<br><br>**3.** ಗುಲ್ಬರ್ಗಾ ವಿಶ್ವವಿದ್ಯಾಲಯದ ಬಿಎಡ್ ಮೌಲ್ಯಮಾಪನ ಕಾರ್ಯದಲ್ಲಿ ಅಕ್ರಮ ನಡೆದಿರುವ ಬಗ್ಗೆ | ಹಾಗೂ ಇತರೆ ವಿಷಯಗಳ ಕುರಿತು ಮಾಧ್ಯಮ ಹಾಗೂ ಸಾರ್ವಜನಿಕ ದೂರುಗಳ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ಸತ್ಯಾಸತ್ಯತೆಯನ್ನು ಅರಿಯಲು ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಇವರು 29.11.2024ರಂದು ಪರಿಶೀಲನಾ ವರದಿಯನ್ನು ಸಲ್ಲಿಸಿರುತ್ತಾರೆ.<br><br>3.ಗುಲ್ಬರ್ಗಾ ವಿಶ್ವವಿದ್ಯಾಲಯದ ಬಿಎಡ್ ಮೌಲ್ಯಮಾಪನ ಕಾರ್ಯದಲ್ಲಿ ಅಕ್ರಮ ನಡೆದಿರುವ ಬಗ್ಗೆ, ಗುಲ್ಬರ್ಗಾ ವಿಶ್ವವಿದ್ಯಾಲಯವು ದಿನಾಂಕ : 12.06.2025 ಸರ್ಕಾರಕ್ಕೆ ವರದಿ ಸಲ್ಲಿಸಿದೆ. |
| | | **6** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿನ ಹುದ್ದೆಗಳ ನೇಮಕಾತಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿನ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ದಿ. 14.01.2024ರಂದು ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. |
| | | **7.** | **ಕರ್ನಾಟಕ ಜಾನಪದ ವಿಶ್ವವಿದ್ಯಾಲಯ** | ಪ್ರೊ. ಗಂಗಾನಾಯಕ್, ಇವರು ಈ ಹಿಂದೆ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ಹೊರಗುತ್ತಿಗೆ ಟೆಂಡರ್ ಮತ್ತು ಲ್ಯಾಪ್ ಟ್ಯಾಪ್ ಖರೀದಿಸಿರುವ ಬಗ್ಗೆ. | ಶ್ರೀ ಗಂಗಾಧರ ಎಂ. ಭಾಣದ ಅಧ್ಯಕ್ಷರು, ಭಾರತೀಯ ಜನತಾ ಪಾರ್ಟಿ, ಸವಣೂರು ಮಂಡಳ, ಇವರ ಸರ್ಕಾರಕ್ಕೆ ದಿನಾಂಕ: 24-03-2022 ರಂದು ದೂರು ಸಲ್ಲಿಸಿದ್ದು, ಈ ಬಗ್ಗೆ, ಕಾಲೇಜು ಶಿಕ್ಷಣ ಇಲಾಖೆಗೆ ಪರಿಶೀಲಿಸಿ ವರದಿ ನೀಡುವಂತೆ ದಿನಾಂಕ: 14-09-2022 ರಂದು ಕೋರಲಾಗಿದೆ. |

<table>
<tr>
<td>(ಆ)</td>
<td>ವಿಶ್ವ ವಿದ್ಯಾಲಯಗಳ ಆಡಳಿತವು ನಿಗಧಿತ ಪ್ರಕ್ರಿಯೆಗಳ ಮೂಲಕ ಮತ್ತು ಕೆಳಸ್ತರದಿಂದ ಮೇಲ್ ಸ್ತರದ ಶ್ರೇಣಿಕೃತ (Bottom to top procedural hierarchy) ಸಿಬ್ಬಂದಿ ಅಧಿಕಾರಿ ಟಿಪ್ಪಣಿ ಮೂಲಕ ಮತ್ತು ಮೊದಲೇ ನಿರ್ಧರಿಸಿರುವ ನಿಯಮಗಳಂತೆ ನಡೆಯುತ್ತಿದ್ದರೂ ನಿಯಮಿತವಾಗಿ ಸಾಂವಿಧಾನಿಕ ಸಮಿತಿಗಳ ಸಭೆಗಳಲ್ಲಿ ಚರ್ಚಿಸುತ್ತಿದ್ದರೂ ಮತ್ತು ವಾರ್ಷಿಕ ಲೆಕ್ಕಪತ್ರ ನಡೆಯುತ್ತಿದ್ದರೂ ನೇಮಕಾತಿ ಮತ್ತು ಹಣಕಾಸು ಅವ್ಯವಹಾರಗಳ ನಡೆಯಲು ಕಾರಣಗಳೇನು;</td>
<td rowspan="2">ವಿಶ್ವ ವಿದ್ಯಾನಿಲಯಗಳ ಆಡಳಿತವು ನಿಗಧಿತ ಪ್ರಕ್ರಿಯೆಗಳ ಮೂಲಕ ಮತ್ತು ಕೆಳಸ್ತರದಿಂದ ಮೇಲ್ ಸ್ತರದ ಶ್ರೇಣಿಕೃತ (Bottom to top procedural hierarchy) ಸಿಬ್ಬಂದಿ ಅಧಿಕಾರಿಗಳಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಾ ಅಧಿನಿಯಮ 2000ರಲ್ಲಿ ನಿಗಧಿಪಡಿಸಿರುವ ಜವಬ್ದಾರಿಗಳನ್ನು ಸರಿಯಾಗಿ ನಿರ್ವಹಣೆ ಮಾಡದಿರುವುದು, ತಾವು ಹೊಂದಿರುವ ಹುದ್ದೆಗೆ ನಿಷ್ಠೆಹೊಂದಿಲ್ಲದೇ ಇರುವುದು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆಯ ಬಗ್ಗೆ ಸರಿಯಾಗಿ ತಿಳುವಳಿಕೆ ಇಲ್ಲದೆ ಇರುವುದರಿಂದ ಈ ರೀತಿಯ ಅವ್ಯವಹಾರಗಳು ಸಂಭವಿಸುತ್ತಿವೆ.<br><br>ವಿಶ್ವವಿದ್ಯಾನಿಲಯಗಳ ಸಾಂವಿಧಾನಿಕ ಪ್ರಾಧಿಕಾರಗಳಾದ ಸಿಂಡಿಕೇಟ್, ಶೈಕ್ಷಣಿಕ ಮಂಡಳಿಯ ಸದಸ್ಯರು ಮತ್ತು ಆಡಿಟ್ ಸಂಸ್ಥೆಗಳ ಸಹಿತ ಇತರ ಅಧಿಕಾರಿಗಳು ಹೊಂದಿರುವ ಜವಾಬ್ದಾರಿಗಳು ಹಾಗೂ ಸದರಿ ಜವಾಬ್ದಾರಿಗಳನ್ನು ನಿರ್ವಹಿಸದಿರುವ ಆಡಳಿತ ಸಮಿತಿಯ ಸದಸ್ಯರುಗಳ ವಿರುದ್ಧ ಕೈಗೊಂಡ ಕ್ರಮದ ಮಾಹಿತಿಯ ವಿವರಗಳು ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ.</th><th>ಪ್ರಾಧಿಕಾರಗಳು</th><th>ಜವಬ್ದಾರಿಗಳು</th></tr>
<tr><td>1</td><td>ಸಿಂಡಿಕೇಟ್</td><td>ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ 2000ರ ಪ್ರಕರಣ 29ರಡಿ ಸಿಂಡಿಕೇಟನ್ನು ವಿಶ್ವವಿದ್ಯಾಲಯದ ಪ್ರಾಧಿಕಾರವಾಗಿ ರಚಿಸಲು ಅವಕಾಶವಿದ್ದು, ಸಿಂಡಿಕೇಟ್ ಪ್ರಾಧಿಕಾರವು ಈ ಕೆಳಕಂಡ ಅಧಿಕಾರಿಗಳನ್ನು ಹೊಂದಿರುತ್ತದೆ.<br><br>• ವಿಶ್ವವಿದ್ಯಾನಿಲಯದ ನಿಧಿಗಳ ಮತ್ತು ಸ್ವತ್ತುಗಳ ನಿರ್ವಹಣೆಯ ಮತ್ತು ವಿಶ್ವವಿದ್ಯಾನಿಲಯದ ವ್ಯವಹಾರಗಳ ಆಡಳಿತದ ಅಧಿಕಾರವನ್ನು ಹೊಂದಿರತಕ್ಕದ್ದು,<br>• ವಿಶ್ವವಿದ್ಯಾಲಯದ ಹಣಕಾಸು ಮತ್ತು ಎಲ್ಲ ಇತರ ಆಡಳಿತಾತ್ಮಕ ವ್ಯವಹಾರಗಳನ್ನು ನಿರ್ವಹಿಸುವುದು ಮತ್ತು ನಿಯಂತ್ರಿಸುವುದು,<br>• ವಿಶ್ವವಿದ್ಯಾಲಯದ ಪಾಠ ಮತ್ತು ಸಂಶೋಧನೆ, ಪರೀಕ್ಷೆಗಳು ಮತ್ತು ಘಟಿಕೋತ್ಸವ ಪ್ರವೇಶ, ಕಾಲೇಜುಗಳ ಸಂಯೋಜನೆ ಮತ್ತು ಪರಿವೀಕ್ಷಣೆ ಕಾರ್ಯಗಳನ್ನು ನಿರ್ವಹಿಸುವುದು.<br>• ಪರೀಕ್ಷಾ ಶುಲ್ಕ ವಿಧಿಸುವುದು ಮತ್ತು ವಸೂಲಿ ಮಾಡುವುದು.<br>• ಹುದ್ದೆಗಳ ಸೃಜನೆ ಮಾಡುವುದು,<br>• ವಿಶ್ವವಿದ್ಯಾಲಯದಿಂದ ಅಥವಾ ಅದರ ವಿರುದ್ಧ ಕಾನೂನು ವ್ಯವಹರಣೆ ನಡೆಸಲು ವ್ಯವಸ್ಥೆ ಮಾಡುವುದು.<br>• ಪರಿನಿಯಮಗಳನ್ನು ರಚಿಸುವುದು, ಅವುಗಳ ತಿದ್ದುಪಡಿ ಮಾಡುವುದು ಮತ್ತು ನಿರಸನಗೊಳಿಸುವುದು.<br>• ವಿಶ್ವವಿದ್ಯಾಲಯದ ಹಣಕಾಸು ಅಂದಾಜುಗಳನ್ನು ತಯಾರಿಸುವುದು.</td></tr>
</table>
</td>
</tr>
<tr>
<td>(ಇ)</td>
<td>ಹಾಗಿದ್ದರೇ, ಈ ನೇಮಕಾತಿ ಮತ್ತು ಹಣಕಾಸು ಅವ್ಯವಹಾರಗಳ ಬಗ್ಗೆ ಅರಿವಿರಬೇಕಾದ ಸಾಂವಿಧಾನಿಕ ಪ್ರಾಧಿಕಾರಗಳಾದ ಸಿಂಡಿಕೇಟ್, ಶೈಕ್ಷಣಿಕ ಮಂಡಳಿಯ ಸದಸ್ಯರು ಮತ್ತು ಆಡಿಟ್ ಸಂಸ್ಥೆಗಳ ಸಹಿತ ಇತರ ಅಧಿಕಾರಿಗಳು ಹೊಂದಿರುವ ಜವಾಬ್ದಾರಿ ಏನು; ಆಡಳಿತದ ಸಮಿತಿ ಸದಸ್ಯರುಗಳ ಮೇಲೆ ಕ್ರಮಜರುಗಿಸಲಾಗಿದೆಯೇ;<br>ಕ್ರಮಜರುಗಿಸದಿರಲು ಕಾರಣಗಳೇನು;</td>
</tr>
</table>

| | | | | |
|---|---|---|---|---|
| | | 2 | ವಿದ್ಯಾ ವಿಷಯಕ ಪರಿಷತ್ತು | ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ 2000ರ ಪ್ರಕರಣ 30ರಡಿ ವಿದ್ಯಾವಿಷಯಕ ಪರಿಷತ್ತನ್ನು ವಿಶ್ವವಿದ್ಯಾಲಯದ ಪ್ರಾಧಿಕಾರವಾಗಿ ರಚಿಸಲು ಅವಕಾಶವಿದು ವಿದ್ಯಾವಿಷಯಕ ಪರಿಷತ್ತು ಪ್ರಾಧಿಕಾರವು ಈ ಕೆಳಕಂಡ ಅಧಿಕಾರಿಗಳನ್ನು ಹೊಂದಿರುತ್ತದೆ.<br>• ವಿದ್ಯಾವಿಷಯಕ ಪರಿಷತ್ತು ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ನಿಕಾಯವಾಗಿರತಕ್ಕದ್ದು ಮತ್ತು ಈ ಅಧಿನಿಯಮದ, ಪರಿನಿಯಮಗಳ, ಆರ್ಡಿನೆನ್ಸ್ ಗಳು, ವಿನಿಯಮಗಳ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾನಿಲಯದ ಶಿಕ್ಷಣ, ವಿದ್ಯಾಭ್ಯಾಸ ಮತ್ತು ಪರೀಕ್ಷೆಗಳ ನಿಯಂತ್ರಣ ಹಾಗೂ ಸಾಮಾನ್ಯ ವಿನಿಯಮವನ್ನು ಹೊಂದಿರತಕ್ಕದ್ದು ಮತ್ತು ಅವುಗಳ ಗುಣಮಟ್ಟಗಳನ್ನು ಕಾಪಾಡುವ ಜವಾಬ್ದಾರಿ ಹೊಂದಿರತಕ್ಕದ್ದು.<br>• ಪರೀಕ್ಷೆಗಳ ಫಲಿತಾಂಶಗಳನ್ನು ಘೋಷಿಸಿವುದು, ಸಂಶೋಧನೆ ಹಾಗೂ ವಿಶೇಷ ಅಧ್ಯಯನಗಳನ್ನು ವೃದ್ಧಿಪಡಿಸಲು ಸ್ಕೀಂಗಳನ್ನು ರೂಪಿಸುವುದು.<br>• ಬೋಧಕ ಹುದ್ದೆಗಳ ಕರ್ತವ್ಯಗಳನ್ನು ನಿಯಮಿಸುವುದಕ್ಕಾಗಿ ಪ್ರಸ್ತಾವನೆಗಳನ್ನು ಸಿದ್ಧಪಡಿಸುವುದು.<br>• ಪರೀಕ್ಷೆಗಳಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ವಿನಾಯಿತಿ ಮಾನದಂಡಗಳನ್ನು ನಿಗದಿಪಡಿಸುವುದು. ವಿವಿಧ ಅಧ್ಯಯನ ವಿಭಾಗಗಳಲ್ಲಿ ಶಿಕ್ಷಣ, ಬೋಧನೆ ಮತ್ತು ತರಬೇತಿಗಾಗಿ ಅವಕಾಶ ಕಲ್ಪಿಸುವುದು. |
| | | 3 | ಹಣಕಾಸು ಸಮಿತಿ | ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ 2000ರ ಪ್ರಕರಣ 32ರಡಿ ಹಣಕಾಸು ವಿಶ್ವವಿದ್ಯಾಲಯದ ಪ್ರಾಧಿಕಾರವಾಗಿ ರಚಿಸಲು ಅವಕಾಶವಿದ್ದು, ಹಣಕಾಸು ಸಮಿತಿಯು ಈ ಕೆಳಕಂಡ ಅಧಿಕಾರಿಗಳನ್ನು ಹೊಂದಿರುತ್ತದೆ.<br>• ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳ ಸಾಮಾನ್ಯ ಪರಿಶೀಲನೆಗಳನ್ನು ನಡೆಸುವುದು, ವಾರ್ಷಿಕ ಲೆಕ್ಕ ಪರಿಶೋಧನೆಯ ವರದಿಗಳನ್ನು ಪುನರವಲೋಕಿಸುವುದು ಮತ್ತು ಅದರ ಮೇಲೆ ತನ್ನ ಶಿಫಾರಸುಗಳನ್ನು ಮಾಡುವುದು. ಹಾಗೂ ಇದರಡಿ ಕಾಯ್ದೆಯಲ್ಲಿ ನಿಗಧಿ ಪಡಿಸಿರುವ ಅಧಿಕಾರಗಳು. |
| | | 4 | ಪರೀಕ್ಷಕರ ನೇಮಕಾತಿ ಮಂಡಲಿ | ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ 2000ರ ಪ್ರಕರಣ 36ರಡಿ ಪರೀಕ್ಷಕರ ನೇಮಕಾತಿ ಮಂಡಳಿ ರಚಿಸಲು ಅವಕಾಶವಿದ್ದು, ಪರೀಕ್ಷಕರ ನೇಮಕಾತಿ ಮಂಡಳಿಯು ಈ ಕೆಳಕಂಡ ಅಧಿಕಾರಿಗಳನ್ನು ಹೊಂದಿರುತ್ತದೆ.<br>• ವಿಶ್ವವಿದ್ಯಾಲಯದ ಪ್ರತಿಯೊಂದು ವ್ಯಾಸಂಗ ವಿಭಾಗಕ್ಕೆ ಪ್ರತಿ ವರ್ಷಕ್ಕಾಗಿ ಪರೀಕ್ಷಕರ ಪಟ್ಟಿಗಳನ್ನು ಸಿದ್ಧಪಡಿಸಿ ಸಿಂಡಿಕೇಟ್‌ನ ಅನುಮೋದನೆಯ ಪಡೆಯುವುದು. |
| | | ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 9ರಲ್ಲಿ ಕುಲಾಧಿಪತಿಯು, ತಾನಾಗಿ ಅಥವಾ ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇಲೆ ವಿಶ್ವವಿದ್ಯಾಲಯದ ಆಡಳಿತ ಮತ್ತು ವಿದ್ಯಾವಿಷಯಕ ಕಾರ್ಯನಿರ್ವಹಣೆಯ ಮತ್ತು ವಿಶೇಷವಾಗಿ ಶಾಂತಿ ಮತ್ತು ನೆಮ್ಮದಿಯನ್ನು ಕಾಯ್ದುಕೊಂಡು ಬರುವ ದೃಷ್ಟಿಯಿಂದ ಮತ್ತು ಸ್ವತ್ತು ಮತ್ತು ಹಣಕಾಸು | | |

<table>
<tr>
<td></td>
<td></td>
<td>ವ್ಯವಸ್ಥೆಯನ್ನು ಸಂರಕ್ಷಿಸುವುದಕ್ಕಾಗಿ ಅವಶ್ಯಕ ಅಥವಾ ಯುಕ್ತವಾಗಬಹುದಾದ ಅಂಥ ನಿರ್ದೇಶನಗಳನ್ನು ನೀಡಲು ಹಕ್ಕುಳ್ಳವಾಗಿರುತ್ತಾರೆ.<br><br>ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 39(3) ರಲ್ಲಿ ಯಾವುದೇ ಪ್ರಾಧಿಕಾರಕ್ಕೆ ಚುನಾಯಿತನಾದ ಅಥವಾ ನಾಮನಿರ್ದಶನಗೊಂಡ ಯಾವೊಬ್ಬ ವ್ಯಕ್ತಿಯನ್ನು, ಅವನ ದುರ್ವರ್ತನೆ, ದುರ್ನಡತೆಯ ಆಧಾರದ ಮೇಲೆ ಅಥವಾ ಅನ್ಯಥಾ ಆ ಬಗ್ಗೆ ವಿಚಾರಣೆ ನಡೆಸಿದ ತರುವಾಯ, ಕುಲಾಧಿಪತಿಯು ಯಾವುದೇ ಸಮಯದಲ್ಲಿ ಅಂಥ ಸದಸ್ಯತ್ವದಿಂದ ಅವನನ್ನು ತೆಗೆದುಹಾಕಲು ಹಕ್ಕುಳ್ಳವರಾಗಿರುತ್ತಾರೆ.</td>
</tr>
<tr>
<td>(ಈ)</td>
<td>ಎಷ್ಟು ಹಗರಣಗಳ ಬಗ್ಗೆ ಯಾವ ರೀತಿಯ ಕ್ರಮಗಳನ್ನು ಸರಕಾರ ತೆಗೆದುಕೊಂಡಿದೆ; ಇಂತಹ ಹಗರಣಗಳಲ್ಲಿ ವ್ಯವಹರಣೆಯಾದ ಅಥವಾ ದುರುಪಯೋಗವಾದ ಹಾಗೂ ವಸೂಲಿಯಾದ ಮೊತ್ತವೆಷ್ಟು; ಮುಂದೆ ಇಂತಹ ಯಾವುದೇ ರೀತಿಯ ಅವ್ಯವಹಾರಗಳು ಆಗದಂತೆ ಮತ್ತು ಆಡಳಿತಾಧಿಕಾರ ಏಕವ್ಯಕ್ತಿಯಲ್ಲಿ ಕೇಂದ್ರೀಕೃತವಾಗದಂತೆ ಏನು ಕ್ರಮವಹಿಸಲಾಗುತ್ತಿದೆ? (ವಿವರ ನೀಡುವುದು)</td>
<td>ವಿಶ್ವವಿದ್ಯಾಲಯಗಳಲ್ಲಿ ಈ ರೀತಿಯ ಹಗರಣಗಳಿಗೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮದ ಮಾಹಿತಿ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ.</th><th>ವಿಶ್ವವಿದ್ಯಾಲಯದ ಹೆಸರು</th><th>ಹಗರಣ ಸ್ವರೂಪ</th><th>ಪ್ರಸ್ತುತ ಹಂತ / ತೆಗೆದುಕೊಂಡ ಕ್ರಮ</th></tr>
<tr><td>1.</td><td>ಬೆಂಗಳೂರು ವಿಶ್ವವಿದ್ಯಾಲಯ</td><td>1) ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸೆಪ್ಟೆಂಬರ್ / ಅಕ್ಟೋಬರ್ ನಿಂದಜರುಗಿದ ಸ್ನಾತಕ ಪದವಿ ಕೋರ್ಸುಗಳಲ್ಲಿ 804 ಉತ್ತರ ಪತ್ರಿಕೆಗಳ ಅಂಕಗಳನ್ನು ತಿದ್ದಿ ಫಲಿತಾಂಶವನ್ನು ಕೃತಿಮಗೊಳಿಸಿ ಒಡಂಬಡಿಕೆಯಲ್ಲಿ ರಹಸ್ಯ ಕಾಪಾಡುವ ಷರತ್ತನ್ನು ಉಲ್ಲಂಘಿಸಿ ಕ್ರಿಮಿನಲ್ ಸ್ವರೂಪದ ಅಕ್ರಮವೆಸಗಿರುವ ಬಗ್ಗೆ.<br><br>2. 1998ನೇ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ನಕಲಿ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ವಿತರಿಸಿದ ಪ್ರಮಾಣ ಪತ್ರದ ಬಗ್ಗೆ.</td><td>1. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 21 ಸಿಒಡಿ 2021,ದಿನಾಂಕ 13.03.2023 ರಲ್ಲಿ ಸಿ.ಐ.ಡಿ. ತನಿಖೆಗೆ ವಹಿಸಲಾಗಿದೆ. ಸಿ.ಐ.ಡಿ ಯಿಂದ 1 ನೇ ಎಸಿಎಂಎಂ ನ್ಯಾಯಾಲಯ,, ಬೆಂಗಳೂರು, ಇಲ್ಲಿ ದಿನಾಂಕ:21-04-2025 ರಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ.<br><br>2.ಈ ಪ್ರಕರಣಕ್ಕೆ ಸಂಬಂಧಿಸಿದಂತೆ 1998ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ದೂರ ಶಿಕ್ಷಣದ ಮೂಲಕ ಪದವಿ ಪಡೆದ ವಿದ್ಯಾರ್ಥಿಗಳಿಗೆ ನಕಲಿ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ವಿತರಿಸಿ ಹಾಗೂ 1990-95ನೇ ಸಾಲಿನ ಅವಧಿಯಲ್ಲಿ</td></tr>
</table>
</td>
</tr>
</table>

| | | | | | |
|---|---|---|---|---|---|
| | | | | | ಬಿ.ಇ (Civil) ಪದವಿ ಪಡೆದ ವಿದ್ಯಾರ್ಥಿಯ ನೋಂದಣಿ ಸಂಖ್ಯೆಯನ್ನು ದುರುಪಯೋಗ ಪಡಿಸಿಕೊಂಡು ಬೇರೊಬ್ಬರಿಗೆ ಅಕ್ರಮವಾಗಿ 23 ಅಂಕಪಟ್ಟಿಗಳನ್ನು ವಿತರಿಸಿ ಕ್ರಿಮಿನಲ್ ವಂಚನೆ ಎಸಗಿರುವ ಪ್ರಕರಣವು ಬೆಂಗಳೂರಿನ 09ನೇ ಎ.ಸಿ.ಎಂ.ಸಿ. ನ್ಯಾಯಾಲಯದಲ್ಲಿ ವಿಚಾರಣಾಧೀನದಲ್ಲಿದೆ. ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಸಿ.ಒ.ಡಿ ಯಿಂದ ಸಮಗ್ರ ತನಿಖೆ ನಡೆಸಲು ಒಳಾಡಳಿತ ಇಲಾಖೆಯನ್ನು ದಿನಾಂಕ: 25.07.2025 ರಂದು ಕೋರಿದ್ದು ಒಳಾಡಳಿತ ಇಲಾಖೆಯಿಂದ ಈ ಬಗ್ಗೆ ಆದೇಶ ಇನ್ನೂ ಹೊರಡಿಸ ಬೇಕಾಗಿರುತ್ತದೆ. |
| | | | | **3.** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 2017-18ನೇ ಸಾಲಿನಲ್ಲಿ ನಡೆದ ಪರೀಕ್ಷೆಗಳ ಸಂಬಂಧದಲ್ಲಿ ಉತ್ತರ ಪತ್ರಿಕೆಗಳ ಮುದ್ರಣ ಅಭೀಕ್ಷಣೆ ಹಾಗೂ ನಿರ್ವಹಣೆ ಮತ್ತು ಇತರೆ ಕಾರ್ಯಗಳ ಸಂಗ್ರಹಣೆ ಬಗ್ಗೆ ಕಾರ್ಯದೇಶವನ್ನು ಪರೀಕ್ಷೇರಿಸಿದ ಕಾರಣ ಈ ಪರೀಕ್ಷ ಕಾರ್ಯಗಳನ್ನು ಪೂರೈಸಿದ M/s Attris Technology Agency ಗೆ ರೂ. 0.95 ಕೋಟಿಗಳಷ್ಟು ಅನುಸುಚಿತ ಲಾಭದಲ್ಲಿ ಪರಿಣಮಿಸಿರುವ ಬಗ್ಗೆ. | 3. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸುವ ಬಗ್ಗೆ ಕ್ರಮವಹಿಸಲಾಗುತ್ತಿದೆ ಹಾಗೂ ಪ್ರಕರಣಕ್ಕೆ ಸಂಬಂಧಿಸಿದಂತೆ ಕುಲಸಚಿವರ ಅಧ್ಯಕ್ಷತೆಯಲ್ಲಿ ರಚನೆಯಾಗಿದ್ದ ಸಮಿತಿಯು ಸಲ್ಲಿಸಿರುವ ವರದಿಯನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ. |
| | | 2 | ಮಂಗಳೂರು ವಿಶ್ವವಿದ್ಯಾಲಯ | ಮಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ.ಬೈರಪ್ಪ ಇವರ ಆಡಳಿತ ಅವಧಿಯಲ್ಲಿ ಪರೀಕ್ಷೆ ನಿರ್ವಹಣಾ ಗುತ್ತಿಗೆ, ಹಾಸ್ಟೆಲ್ ಗುತ್ತಿಗೆ, ಸೋಲಾರ್, ಕಂಪ್ಯೂಟರ್ ಹಾಗೂ ಸಿ.ಸಿ.ಟಿ.ವಿ, ಖರೀದಿಯಲ್ಲಿ ಭ್ರಷ್ಟಾಚಾರ ಹಾಗೂ ರಾಜ್ಯಪಾಲರ ಅನುಮತಿ ಇಲ್ಲದಿದ್ದರೂ ಅಕ್ರಮ ನೇಮಕಾತಿ ಬಗ್ಗೆ ತನಿಖೆ ನಡೆಸುವಂತೆ ಭಾರತೀಯ ವಿದ್ಯಾರ್ಥಿ ಪರಿಷತ್ ಆಗ್ರಹಿಸುವ ಕುರಿತು. | ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ. 26.02.2024ರಂದು ವಿಚಾರಣೆ ನಡೆಸಿ ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸದರಿ ವರದಿಯ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಅಧಿಕಾರಿ/ಸಿಬ್ಬಂದಿಗಳಿಂದ ಅಧಿಕಾರ ದುರ್ಬಳಕೆ, ಕರ್ತವ್ಯ ಲೋಪ, ದುರ್ನಡತೆ, ಆರ್ಥಿಕ ನಷ್ಟ ಉಂಟಾಗಿರುವ ಬಗ್ಗೆ ವರದಿಸಲಾಗಿದ್ದು, ಆದರೆ ಈ ಹಗರಣ ನಡೆದ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿ/ಸಿಬ್ಬಂದಿಗಳ ವಿವರಗಳನ್ನು ಸಮಿತಿಯು ಒದಗಿಸಿರುವುದಿಲ್ಲ. ಆದ್ದರಿಂದ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿ/ ಸಿಬ್ಬಂದಿಗಳ ವಿವರಗಳನ್ನು ಒದಗಿಸುವಂತೆ, ಶ್ರೀ ರಾಧಾಕೃಷ್ಣ ಹೊಳ್ಳ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರನ್ನು ದಿನಾಂಕ: 19.07.2025ರ |

| | | | | | |
|---|---|---|---|---|---|
| | | | | | ಪತ್ರದಲ್ಲಿ ಕೋರಲಾಗಿದ್ದು, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರು ದಿನಾಂಕ: 28.07.2025 ರಂದು ಸರ್ಕಾರಕ್ಕೆ ಪತ್ರ ಬರೆದು, ಈ ಹಿಂದೆ ಸಲ್ಲಿಸಲಾಗಿದ್ದ, ತನಿಖಾ ವರದಿಯನ್ನು ಲಗತ್ತಿಸಿ ಕಳುಹಿಸಿಕೊಟ್ಟಲ್ಲಿ ಅದರಲ್ಲಿರುವ ಮಾಹಿತಿಗಳ ಆಧಾರದ ಮೇಲೆ, ಈ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿ/ಸಿಬ್ಬಂದಿಗಳ ವಿವರದೊಂದಿಗೆ ಆಗಿರುವ ನಷ್ಟದ ಬಗ್ಗೆ ವಿವರಗಳನ್ನು ನೀಡುವುದಾಗಿ ಪತ್ರದ ಮೂಲಕ ತಿಳಿಸಿರುತ್ತಾರೆ. |
| | | 3 | ಕುವೆಂಪು ವಿಶ್ವವಿದ್ಯಾಲಯ | ಕುವೆಂಪು ವಿಶ್ವವಿದ್ಯಾಲಯದಲ್ಲಿ ಸ್ಮಾರ್ಟ್ ಕ್ಲಾಸ್ ಒದಗಿಸಲು ಸಮಾಜ ಕಲ್ಯಾಣ ಇಲಾಖೆಯಿಂದ ಬಿಡುಗಡೆ ಮಾಡಲಾದ ಅನುದಾನ ದುರುಪಯೋಗದ ಕುರಿತು. | ಕುವೆಂಪು ವಿಶ್ವವಿದ್ಯಾಲಯದಲ್ಲಿ ಸ್ಮಾರ್ಟ್ ಕ್ಲಾಸ್ ಒದಗಿಸಲು ಸಮಾಜ ಕಲ್ಯಾಣ ಇಲಾಖೆಯಿಂದ ಬಿಡುಗಡೆ ಮಾಡಲಾದ ಅನುದಾನ ದುರುಪಯೋಗದ ಕುರಿತು ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ರವೀಂದ್ರನಾಥ್.ಹೆಚ್.ಬಿ. ಇವರು ದಿ:05.07.2024ರಂದು ಸರ್ಕಾರಕ್ಕೆ ವರದಿ ಸಲ್ಲಿಸಿದ್ದು ಸರ್ಕಾರದ ಹಂತದಲ್ಲಿ ಈ ಬಗ್ಗೆ ಪರಿಶೀಲಿಸಲಾಗುತ್ತಿದೆ. |
| | | 4 | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ | **1.** 2009-10ನೇ ಸಾಲಿನಿಂದ 2015-16ರ ಸಾಲಿನ ವರೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ದೇಶದೆಲ್ಲೆಡೆ ಸಹಭಾಗಿತ್ವ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ವಿದ್ಯಾರ್ಥಿಗಳಿಂದ ಸ್ವೀಕರಿಸಿರುವ ಶುಲ್ಕವನ್ನು ದುರ್ಬಳಕೆ ಮಾಡಿಕೊಂಡಿರುವ ಬಗ್ಗೆ.<br><br>**2.** ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಸಚಿವರು (ಆಡಳಿತ) ಇವರು ವಿಶ್ವವಿದ್ಯಾಲಯದ ಸಿಬ್ಬಂದಿಗಳ ನೇಮಕಾತಿ, ವರ್ಗಾವಣೆ ಹಾಗೂ ಪದನಾಮ ಬದಲಾವಣೆಯಲ್ಲಿ ವಿಶ್ವವಿದ್ಯಾಲಯದ ಸಿಬ್ಬಂದಿಗಳಿಂದಲೇ ಲಂಚದ ಬೇಡಿಕೆ ಇಟ್ಟು, ಹಣ ವಸೂಲಿ ಮಾಡುತ್ತಿದ್ದಾರೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ನೌಕರರ ಸಂಘದವರು ವಿಶ್ವವಿದ್ಯಾಲಯದ ಕುಲಸಚಿವರ (ಆಡಳಿತ) ಇವರ ವಿರುದ್ಧ ನಡೆಸಿರುವ ಪ್ರತಿಭಟನೆಯ ಕುರಿತು. | ಈ ಪ್ರಕರಣದ ಕುರಿತು ತನಿಖೆ ನಡೆಸಲು ಸರ್ಕಾರದ ಆದೇಶ ಸಂಖ್ಯೆ: HD/[illegible]9/COD/2022, ದಿನಾಂಕ: 13.03.2023 ರನ್ವಯ ಸಿಬಿಐ ತನಿಖೆಗೆ ವಹಿಸಲಾಗಿರುತ್ತದೆ. ತನಿಖೆಯು ಜಾರಿಯಲ್ಲಿರುತ್ತದೆ.<br><br>2. ಈ ಪ್ರಕರಣದ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸುವಂತೆ ದಿನಾಂಕ: 21.03.2025ರ ಪತ್ರ ಮುಖೇನ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಇವರಿಗೆ ತಿಳಿಸಲಾಗಿದ್ದು, ಸದರಿಯವರು ದಿನಾಂಕ: 21.05.2025ರಂದು ವರದಿ ಸಲ್ಲಿಸಿದ್ದು, ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |
| | | 5 | ಗುಲಬರ್ಗಾ ವಿಶ್ವವಿದ್ಯಾಲಯ | **1.** ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ 2021 ರಿಂದ 2024ರವರೆಗೆ ಅಂಕಪಟ್ಟಿ ನೀಡಲು ಭೌತಿಕವಾಗಿ ಅಂಕಪಟ್ಟಿ ಮುದ್ರಿಸಿ ಮತ್ತು ಸರಬರಾಜು ಮಾಡಿ | ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ 2021 ರಿಂದ 2024ರವರೆಗೆ ಅಂಕಪಟ್ಟಿ ನೀಡಲು |

| | | | | | |
|---|---|---|---|---|---|
| | | | | ರೂ.11.00ಕೋಟಿ ವಿಶ್ವವಿದ್ಯಾಲಯಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವ ಪ್ರಕರಣದ ಕುರಿತು | ಭೌತಿಕವಾಗಿ ಅಂಕಪಟ್ಟಿ ಮುದ್ರಿಸಿ ಮತ್ತು ಸರಬರಾಜು ಮಾಡಿ ರೂ.11.00 ಕೋಟಿ ವಿಶ್ವವಿದ್ಯಾಲಯಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವ ಕುರಿತು ವಿಶ್ವವಿದ್ಯಾಲಯವು ದಿ: 05.04.2025ರಂದು ವರದಿ ಸಲ್ಲಿಸಿದ್ದು, ಸರ್ಕಾರದ ಹಂತದಲ್ಲಿ ಈ ಬಗ್ಗೆ ಪರಿಶೀಲಿಸಲಾಗುತ್ತಿದೆ. |
| | | | | **2.** ಗುಲಬರ್ಗಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಪರೀಕ್ಷಾ, ಮೌಲ್ಯಮಾಪನ ಹಾಗೂ ಫಲಿತಾಂಶ ಸಮಯಕ್ಕೆ ಸರಿಯಾಗಿ ಪ್ರಕಟಿಸದೇ ಹಾಗೂ ಅನರ್ಹ ಮತ್ತು ಅನಧಿಕೃತ ಅಧ್ಯಾಪಕರಿಂದ ಮೌಲ್ಯಮಾಪನ ಮಾಡಿರುವ ಬಗ್ಗೆ. | ಗುಲಬರ್ಗಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಪರೀಕ್ಷಾ, ಮೌಲ್ಯಮಾಪನ ಹಾಗೂ ಫಲಿತಾಂಶವನ್ನು ಸಮಯಕ್ಕೆ ಸರಿಯಾಗಿ ಪ್ರಕಟಿಸದೇ ಇರುವ ಬಗ್ಗೆ ಹಾಗೂ ಇತರೆ ವಿಷಯಗಳ ಕುರಿತು ಮಾಧ್ಯಮ ಹಾಗೂ ಸಾರ್ವಜನಿಕ ದೂರುಗಳ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ಸತ್ಯಾಸತ್ಯತೆಯನ್ನು ಅರಿಯಲು ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಇವರು 29.11.2024ರಂದು ಪರಿಶೀಲನಾ ವರದಿ ಸಲ್ಲಿಸಿದ್ದು, ಸರ್ಕಾರದ ಹಂತದಲ್ಲಿ ಈ ಬಗ್ಗೆ ಪರಿಶೀಲಿಸಲಾಗುತ್ತಿದೆ. |
| | | | | **3.** ಗುಲ್ಬರ್ಗಾ ವಿಶ್ವವಿದ್ಯಾಲಯದ ಬಿಎಡ್ ಮೌಲ್ಯಮಾಪನ ಕಾರ್ಯದಲ್ಲಿ ಅಕ್ರಮ ನಡೆದಿರುವ ಬಗ್ಗೆ | ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸತ್ಯಾಸತ್ಯತೆ ತಿಳಿಯಲು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 8(1)ರಡಿ ವಿಚಾರಣಾಧಿಕಾರಿಯನ್ನು ನೇಮಿಸುವಂತೆ ಘನತೆವೆತ್ತ ರಾಜ್ಯಪಾಲರನ್ನು ಕೋರಲಾಗಿರುತ್ತದೆ. |
| | | 6. | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿನ ಹುದ್ದೆಗಳ ನೇಮಕಾತಿ | ವಿಶ್ವವಿದ್ಯಾಲಯದಲ್ಲಿನ ನೇಮಕಾತಿಯಲ್ಲಿನ ಅವ್ಯವಹಾರದ ಕುರಿತಂತೆ ತನಿಖೆ ನಡೆಸಲು ಕಾನೂನು ಇಲಾಖೆಯಿಂದ ಹೊರಡಿಸಲಾಗಿರುವ ನಿವೃತ್ತ ನ್ಯಾಯಾಧೀಶರ ಪಟ್ಟಿಯಲ್ಲಿನ ಪೈಕಿ ಒಬ್ಬರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸುವಂತೆ **ದಿ: 6.6.2025ರ** ಪತ್ರ ಮುಖೇನ ಘನತೆವೆತ್ತ ರಾಜ್ಯಪಾಲರ ಸಚಿವಾಲಯವನ್ನು ಕೋರಲಾಗಿರುತ್ತದೆ. |
| | | 7. | ಕರ್ನಾಟಕ ಜಾನಪದ ವಿಶ್ವವಿದ್ಯಾಲಯ | ಪ್ರೊ. ಗಂಗಾನಾಯಕ್, ಇವರು ಈ ಹಿಂದೆ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ಹೊರಗುತ್ತಿಗೆ ಟೆಂಡರ್ ಮತ್ತು ಲ್ಯಾಪ್ ಟ್ಯಾಪ್ ಖರೀದಿಸಿರುವ ಬಗ್ಗೆ | ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಲೇಜು ಶಿಕ್ಷಣ ಇಲಾಖೆ ರವರು ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಹೊರಗುತ್ತಿಗೆ ಟೆಂಡರ್ ಕರೆದಿರುವ ಬಗ್ಗೆ ದಾಖಲೆ ಒದಗಿಸಿರುವುದಿಲ್ಲ ಹಾಗೂ ಲ್ಯಾಪ್ ಟ್ಯಾಪ್ ಗಳ ದಾಸ್ತಾನು |

| | | | | | |
|---|---|---|---|---|---|
| | | | | | ಪಡೆದ ಬಗ್ಗೆ ದಾಖಲೆ ಒಗಿಸಿರುವುದಿಲ್ಲ ಹಾಗೂ ಇವುಗಳನ್ನು ಫಲಾನುಭವಿಗಳಿಗೆ ಒದಗಿಸಿರುವ ದಾಖಲೆ ಒದಗಿಸಿರುವುದಿಲ್ಲ ಎಂದು ತಿಳಿಸಲಾಗಿದೆ.<br>ಈ ಬಗ್ಗೆ ಹೆಚ್ಚಿನ ತನಿಖೆ ನಡೆಸಲು ಕರ್ನಾಟಕ ಜಾನಪದ ವಿಶ್ವವಿದ್ಯಾಲಯಗಳ ಅಧಿನಿಯಮ 2011 ರ ಪ್ರಕರಣ 11(1) ರನ್ವಯ ನಿವೃತ್ತ ನ್ಯಾಯಾಧೀಶರ ಪರ ಅಧ್ಯಕ್ಷತೆಯಲ್ಲಿ ಹೆಚ್ಚಿನ ತನಿಖೆ ನಡೆಸಲು ಘನತೆವೆತ್ತ ರಾಜ್ಯ ಪಾಲರ ಅನುಮೋದನೆ ಕೋರಲಾಗಿದೆ. |
| | | | | | |

ಸಂಖ್ಯೆ:ಇಡಿ/368 /ಯುಆರ್‌ಸಿ/2025

(ಡಾ|| ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಇಲಾಖೆ ಸಚಿವರು.